

## ಜಾಗೃತಿ ಇರಲಿ

ಮನೆಯಲ್ಲೇ ವಿವಿಧ ಕೇಶ ವಿನ್ಯಾಸ ಮಾಡಬಯಸುವವರು ಹೇರ್ ಸ್ಟ್ರೈಟ್‌ನರ್ ಇಟ್ಟುಕೊಳ್ಳುವುದು ಅನಿವಾರ್ಯ. ಗುಂಗುರು ಕೂದಲನ್ನು ನೀಳವಾಗಿ, ನೀಳ ಕೇಶವನ್ನು ಸುರಳಿಯಾಗಿ ಹೀಗೆ ಯಾವ ವಿನ್ಯಾಸಕ್ಕಾದರೂ ಒಗ್ಗಿಸಿಕೊಳ್ಳಬಹುದು. ಆದರೆ ಸ್ಟ್ರೈಟ್‌ನರ್ ಬಳಸುವಾಗ ಜಾಗರೂಕರಾಗಿರಬೇಕು. ನೆತ್ತಿಗೆ ಶಾಖ ತಾಗದಂತೆ ನಿಗಾ ವಹಿಸಬೇಕು. ಇದರ ನಿರಂತರ ಬಳಕೆ ಒಳ್ಳೆಯದಲ್ಲ. ಅಪರೂಪಕ್ಕೆ ಬಳಸಿದರೆ ತೊಂದರೆ ಇಲ್ಲ.







ಪಾಶ್ಚಾತ್ಯ ದಿರಿಸಿರಲಿ, ಸಾಂಪ್ರದಾಯಿಕ ಉಡುಗೆಯಿರಲಿ ಎರಡಕ್ಕೂ ಒಗ್ಗಿಕೊಳ್ಳುವ ಸಾರ್ವಕಾಲಿಕ ವಿನ್ಯಾಸವಿದು.

### ಅಪ್-ಡು (updo)

ಎಲ್ಲ ಬಗೆಯ ಮುಖದ ಆಕಾರಕ್ಕೂ ಹೊಂದಿಕೆಯಾಗುತ್ತದೆ. ಮದುವೆ ಆರತಕ್ಷತೆ ಹಾಗೂ ರಾತ್ರಿ ಪಾರ್ಟಿಗಳಿಗೆ ಹೆಚ್ಚು ಸೂಕ್ತ. ಗುಂಗುರು ಕೂದಲಿಗೆ ಹೆಚ್ಚು ಹೊಂದಿಕೆಯಾಗುವ ಈ ವಿನ್ಯಾಸ ಪಾಶ್ಚಾತ್ಯ ನೋಟವನ್ನು ನೀಡುತ್ತದೆ.

### ಸೈಡ್ ಬ್ರೈಡ್

ಗಿಡ್ಡದಾದ ಹಾಗೂ ಪದರಗಳುಳ್ಳ ಕೂದಲಿಗೆ ಈ ವಿನ್ಯಾಸ ಒಪ್ಪುತ್ತದೆ. ಮೆಸ್ಸಿ ಸೈಡ್ ಬ್ರೈಡ್ ವಿನ್ಯಾಸ ಮದುವೆಗಳಲ್ಲಿ ಟ್ರೆಂಡ್ ಆಗಿದೆ. ಹೃದಯಾಕಾರದ ಮುಖದವರು ಈ ಕೇಶ ವಿನ್ಯಾಸದಲ್ಲಿ ಮತ್ತಷ್ಟು ಮುದ್ದಾಗಿ ಕಾಣುತ್ತಾರೆ.

### ಹಾಫ್ ಅಪ್ ಹಾಫ್ ಡೌನ್

ಗೌನ್ ತೊಟ್ಟಾಗ ಈ ಕೇಶ ವಿನ್ಯಾಸ ಮಾಡಿಕೊಳ್ಳುವುದು ಉತ್ತಮ. ಪಾಶ್ಚಾತ್ಯ ಹಾಗೂ ಆಧುನಿಕ ದಿರಿಸುಗಳಿಗೂ ಇದು ಸೂಕ್ತ.

### ಕೇಶ ಕಿರೀಟಗಳ ಬಳಕೆ

ಕೇಶವಿನ್ಯಾಸವನ್ನು ಮತ್ತಷ್ಟು ಆಕರ್ಷಕವಾಗಿಸಲು ಆ್ಯಸ್ಸೆಸರಿಸ್‌ಗಳ ಬಳಕೆ ಅನಿವಾರ್ಯ. ಹೆರಳಿನ ಸೌಂದರ್ಯವರ್ಧನೆಗೆ ಸಹಜ ಹೂವುಗಳ ಬಳಕೆ ಸಾಮಾನ್ಯ. ಸಾಂಪ್ರದಾಯಿಕ ಉಡುಗೆ ತೊಟ್ಟಾಗ ಸಹಜ ಹೂವುಗಳಿಂದಲೇ ಶೃಂಗರಿಸಿಕೊಳ್ಳಬಹುದು. ಗೌನ್ ತೊಟ್ಟಾಗ ಕೇಶ ಕಿರೀಟ (ಟಿಯಾರಾ) ಬಳಸಿ ಹೆರಳನ್ನು ಸಿಂಗರಿಸಿದರೆ ಮತ್ತಷ್ಟು ಆಕರ್ಷಕವಾಗಿ ಕಾಣುತ್ತದೆ. ಕೃತಕ ಹೂವುಗಳು, ಮೊಗ್ಗಿನ ಜಡೆಗಳು, ಗೊಂಡೆಗಳನ್ನು ಬಳಸುವಾಗ ಅವುಗಳನ್ನು ಹೇರ್‌ಪಿನ್ ಕಾಣದಂತೆ ಜಾಗರೂಕತೆಯಿಂದ ತೊಟ್ಟುಕೊಳ್ಳಬೇಕು ಅಥವಾ ಕೇಶ ವಿನ್ಯಾಸಕರ ಸಲಹೆ ಪಡೆಯುವುದು ಉತ್ತಮ.

### ಕೂದಲ ರಂಗು

ಹೆರಳಿನೊಂದಿಗೆ ಬಣ್ಣದ ಓಕುಳಿ ಆಡುವುದೆಂದರೆ ಅನೇಕರಿಗೆ ಮೆಚ್ಚು. ಆದರೆ ಬಣ್ಣದ ಆಯ್ಕೆಯಲ್ಲಿ ಜಾಗರೂಕತೆ ಇರಬೇಕು ಎನ್ನುವುದು ಕೇಶ ವಿನ್ಯಾಸಕರ ಸಲಹೆ. ಸರಿಯಾದ ರಂಗು ಆಯ್ದುಕೊಂಡರೆ ಅದು ವ್ಯಕ್ತಿತ್ವದ ಸೂಚಕವಾಗುತ್ತದೆ. ಮೈಬಣ್ಣ ಹಾಗೂ ಚರ್ಮದ ಗುಣಧರ್ಮಕ್ಕೆ ಅನುಸಾರ ಹೆರಳಿಗೆ ಬಣ್ಣಹಾಕಿಕೊಳ್ಳಬೇಕು. ಬರ್ಗಂಡಿ ಬಣ್ಣವು ಎಲ್ಲ ಬಣ್ಣದ ಚರ್ಮದವರಿಗೆ ಹೊಂದಿಕೆಯಾಗುತ್ತದೆ. ಬಂಗಾರ ಬಣ್ಣ, ಬೂದು ಬಣ್ಣ, ಚಾಕೊಲೇಟ್ ಬಣ್ಣಗಳು ಹೆಚ್ಚು ಜನಪ್ರಿಯ. ಸಾಗರ ನೀಲಿ, ತಿಳಿ ಹಸಿರು, ಕಿತ್ತಳೆ ಬಣ್ಣ ಅಪರೂಪವಾದರೂ ಇತ್ತೀಚೆಗೆ ಹೆಚ್ಚು ಜನಪ್ರಿಯವಾಗುತ್ತಿವೆ.

### ತಲೆಗೂದಲನ್ನು ಮೃದುವಾಗಿಸಿ...

ನುಣುಪಿನ ಕೇಶರಾಶಿ ಎಲ್ಲರ ಆಸೆ. ಅದನ್ನು ಪಡೆಯಲು ಹರಸಾಹಸ ಮಾಡಬೇಕಾಗುತ್ತದೆ. ಜೊತೆಗೆ ತಲೆಹೊಟ್ಟಿನ ಸಮಸ್ಯೆ ಎದುರಿಸುವವರು ಕಾಳಜಿ ವಹಿಸಬೇಕಾಗುತ್ತದೆ.

- ಮೆಂತೆ ಕಾಳುಗಳನ್ನು ಒಂದು ರಾತ್ರಿ ನೀರಿನಲ್ಲಿ ನೆನೆಸಿ ಪೇಸ್ಟ್ ತಯಾರಿಸಿ. ಇದಕ್ಕೆ ಸ್ವಲ್ಪ ಅಲೊವೆರಾ ಜೆಲ್, ದಾಸವಾಳದ ಎಲೆಯ ಪೇಸ್ಟ್ ಸೇರಿಸಿ ತಲೆಗೆ ಹಚ್ಚಿ. ಅರ್ಧ ಗಂಟೆಯ ಬಳಿಕ ತೊಳೆಯಿರಿ.
- ಒಂದು ಕಪ್ ತೆಂಗಿನಕಾಯಿ ಹಾಲಿಗೆ ಎರಡು ಚಮಚ ಕರಿಬೇವಿನ ರಸ ಸೇರಿಸಿ. ಈ ಮಿಶ್ರಣವನ್ನು ಕೂದಲಿಗೆ ಹಾಕಿ ಒಂದು ಗಂಟೆಗಳ ಕಾಲ ಬಿಟ್ಟು ತೊಳೆಯಿರಿ.
- ಆಲಿವ್ ಆಯಿಲ್, ಮೊಟ್ಟೆಯ ಲೋಳೆ ಲಿಂಬೆರಸ ಹಾಗೂ ಗ್ಲಿಸರಿನ್‌ಗಳನ್ನು ಚೆನ್ನಾಗಿ ಮಿಕ್ಸ್ ಮಾಡಿ ತಲೆಗೂದಲ ಬುಡಕ್ಕೆ ಮಾಲೀಶ್ ಮಾಡಿ ಕೂದಲು ಮೃದುವಾಗುತ್ತದೆ.